# ಸಮಯದ ಸರಿಯಾದ ಬಳಕೆ

'ಜ್ಯೋತಿಷ್ಮತಿ'

ಪ್ರೀತಿಯ ಮಕ್ಕಳೇ,

ನಿಮ್ಮ ವಿದ್ಯಾರ್ಥಿ ಜೀವನ ಕಷ್ಟಕರವೆನಿಸುತ್ತಿದೆಯೆ?

ಓದು, ಅಧ್ಯಯನ ಸರಿಯಾಗಿ ನಡೆಯುತ್ತಿಲ್ಲವೆ?

ನೀವು ನಿರೀಕ್ಷೆ ಮಾಡಿದಷ್ಟು ಅಂಕಗಳು ಸಿಗುತ್ತಿಲ್ಲವೆ?

— ಇಲ್ಲಿದೆ ನಿಮಗೆ ಅತಿ ಉಪಯುಕ್ತವಾದ ಸಲಹೆಗಳು.

ಕೆಲವೊಂದು ಸಣ್ಣ ಬದಲಾವಣೆಗಳು ನಿಮ್ಮ ಓದಿನ ರೀತಿಯನ್ನೇ ಬದಲಾಯಿಸಿ ಬಿಡಬಹುದು. ಒಂದಿಷ್ಟು ಗಮನ ಕೊಟ್ಟು ಈಗ ನೀವು ಮಾಡುತ್ತಿರುವ ಅಭ್ಯಾಸವನ್ನೇ ಸರಿಯಾದ ಕ್ರಮದಲ್ಲಿ ಮಾಡಿದರೆ ಸಾಕು, ನಿಮಗೆ ಆಶ್ಚರ್ಯವಾಗುವಂತಹ ಫಲಿತಾಂಶ ನಿಮಗೆ ಲಭಿಸುವುದು. ಅಂತಹ ಬದಲಾವಣೆಗಳು ಯಾವುವು?

ನಿಮಗೆ ಗೊತ್ತಿದೆ, ಒಂದು ದಿನದಲ್ಲಿ ೨೪ ಗಂಟೆಗಳಷ್ಟೇ ಇರುವುದು. ಅದನ್ನು ಸರಿಯಾಗಿ ಬಳಸಿಕೊಂಡರೆ, ಪರೀಕ್ಷೆಯ ದಿನಗಳಲ್ಲಿ ಓದಿಗೆ ಸಮಯ ಸಾಲದೆ ಪರದಾಡಬೇಕಿಲ್ಲ. ಭಯ, ಆತಂಕಗಳಿಂದಾಗಿ ಓದಿದ್ದು ಯಾವುದೂ ತಲೆಯಲ್ಲಿ ಉಳಿಯದೆ ಕಷ್ಟಪಡಬೇಕಾಗಿಲ್ಲ.

ಅಂದ ಮಾತ್ರಕ್ಕೆ, ದಿನದ ಬಹುಪಾಲು ಸಮಯವನ್ನು ಓದಿಗಾಗಿಯೇ ಕೊಡಬೇಕೆಂದು ಅರ್ಥವಲ್ಲ. ಪ್ರತಿದಿನವೂ ಓದಿಗಾಗಿ ಒಂದಿಷ್ಟು ಸಮಯ ಕೊಡುತ್ತ ಬಂದರೆ, ಅತಿ ಕಡಿಮೆ ಸಮಯದಲ್ಲೇ ಹೆಚ್ಚಿನ ಅಧ್ಯಯನ ಮಾಡುವುದು ಸಾಧ್ಯವಾಗುತ್ತದೆ.

ಇದು ಹೇಗೆ?

ಉದಾಹರಣೆಗೆ, ಒಂದು ಪಾಠವನ್ನು ಓದಿ ಮುಗಿಸಲು ಅರ್ಧ ಗಂಟೆ ಬೇಕಾಗುತ್ತದೆ ಎಂದಿಟ್ಟುಕೊಳ್ಳೋಣ. ಪರೀಕ್ಷೆ ಹತ್ತಿರ ಬಂದಾಗ ಪಠ್ಯದಲ್ಲಿನ ಎಲ್ಲ ಪಾಠಗಳನ್ನೂ ಓದಲು ಸುಮಾರು ೨೦–೨೫ ಗಂಟೆ ಬೇಕಾಗಬಹುದು. ಪರೀಕ್ಷೆಗೆ ಮೊದಲು ಒಂದು ವಾರ ಇರಬೇಕಾದರೆ ನೀವು ಓದಲು ಆರಂಭಿಸುತ್ತೀರಿ ಎಂದಿಟ್ಟುಕೊಳ್ಳಿ. ಹಾಗಿದ್ದರೆ, ಪ್ರತಿದಿನ ಒಂದು ವಿಷಯಕ್ಕೆ ೩ ಅಥವಾ ೪ ಗಂಟೆ (ಬರೀ ಒಂದು ವಿಷಯಕ್ಕೆ) ಬೇಕಾಗುವುದು! ಹಾಗಿದ್ದರೆ ಉಳಿದ ಪಠ್ಯ ಪುಸ್ತಕಗಳನ್ನು ಯಾವಾಗ ಓದುವಿರಿ?

ಇದು ಹೊರೆಯಾಗಲಿಲ್ಲವೆ?

ಇದಕ್ಕೆ ಬದಲಾಗಿ, ಹೀಗೆ ಮಾಡಿ.

ಪರೀಕ್ಷೆ ಹತ್ತಿರ ಬಂದಾಗ ಓದಲು ಆರಂಭಿಸುವ ಕ್ರಮವೇ ತಪ್ಪು, ಅದನ್ನು ಬದಲಾಯಿಸಿ. ಓದು ಆರಂಭವಾಗಬೇಕಾದದ್ದು ಶೈಕ್ಷಣಿಕ ವರ್ಷ ಆರಂಭವಾದಾಗಲೇ. ನೀವು ಯಾವ ಕ್ಲಾಸಿನಲ್ಲೇ ಇದ್ದರೂ, ವರ್ಷದ ಮೊದಲ ದಿನ ಕ್ಲಾಸಿಗೆ ಹೋದ ದಿನವೇ ನಿಮ್ಮ ಓದು ಆರಂಭವಾಗಲಿ. ಆಗ ಇಡೀ ವರ್ಷ ಪರೀಕ್ಷೆಗೆ ತಯಾರಿ ಎಂದಾಯಿತು.

ಒಂದು ಮುಖ್ಯ ಮಾತು: **ನಿಮ್ಮ ಓದು ಪರೀಕ್ಷೆಗಾಗಿ ಅಲ್ಲ. ನಿಮ್ಮ ಜ್ಞಾನ ವೃದ್ಧಿ ಹೊಂದುವುದಕ್ಕಾಗಿ ಮಾತ್ರ.** ಪರೀಕ್ಷೆ ಇರುವುದು ನಿಮಗೆ ಶಿಕ್ಷಣ ನೀಡುವವರಿಗಾಗಿ. ನಿಮ್ಮ ಓದು ಸರಿಯಾಗಿ ನಡೆಯುತ್ತಿದೆಯೇ ಇಲ್ಲವೇ ಎಂದು ಅರಿತುಕೊಳ್ಳಲು, ಅಗತ್ಯ ಬಿದ್ದರೆ ನಿಮಗೆ ಹೆಚ್ಚಿನ ಸಲಹೆ ನೀಡಿ, ನಿಮ್ಮ ಓದನ್ನು ಇನ್ನಷ್ಟು ಉತ್ತಮಗೊಳಿಸಲು, ಅಷ್ಟೆ.

ಪ್ರತಿ ದಿನ ಎಷ್ಟು ಹೊತ್ತು ಓದುವುದಕ್ಕಾಗಿ ಇಡಬೇಕು? — ಇದನ್ನು ನೀವೇ ತೀರ್ಮಾನಿಸಿ. ಕಡೇ ಪಕ್ಷ ಒಂದು ಗಂಟೆಯಾದರೂ ಇರಲಿ. ಅಷ್ಟರೊಳಗೆ ಅಂದು ಮಾಡಿದ ಪಾಠವನ್ನು ಸರಿಯಾಗಿ ಅರ್ಥ ಮಾಡಿಕೊಂಡು ಓದಿ. ಶಾಲೆಗೆ ಹೋಗುವ ಮುನ್ನ, ಅಂದು ಮಾಡಬಹುದಾದ ಪಾಠವನ್ನು ಮೊದಲೇ ನಿಮ್ಮ ಪಾಡಿಗೆ ಓದಿಕೊಂಡು ಅರ್ಥೈಸಿಕೊಳ್ಳಲು ಯತ್ನಿಸಿ. ಇದು ಒಂದು ಉತ್ತಮ ಅಭ್ಯಾಸ. ಅಧ್ಯಾಪಕರು ಪಾಠ ಮಾಡುವಾಗ ಅದು ಇನ್ನಷ್ಟು ಅರ್ಥವಾಗುತ್ತದೆ ; ಹಾಗೂ ನೀವು ತಪ್ಪು ಅರ್ಥ ಮಾಡಿಕೊಂಡಿದ್ದಲ್ಲಿ ಅದನ್ನು ಸರಿಪಡಿಸಿಕೊಳ್ಳಲೂ ಸಾಧ್ಯವಾಗುತ್ತದೆ.

ಒಂದು ವಿಷಯ ಮುಖ್ಯ : **ಯಾವ ಪಾಠವನ್ನೂ ಅರ್ಥ ಮಾಡಿಕೊಳ್ಳದೆ ಮುಂದೆ ಹೋಗಬೇಡಿ.** ಹಲವು ಬಾರಿ ಒಂದೇ ಪಾಠವನ್ನು ಓದಿದಾಗ ಅದು ಹೆಚ್ಚು ಹೆಚ್ಚು ಅರ್ಥವಾಗುತ್ತ ಹೋಗುತ್ತದೆ.

ಈ ರೀತಿ ಮಾಡಿದಾಗ ದಿನನಿತ್ಯ ಕಡಿಮೆ ಸಮಯ ಬಳಸಿಕೂಡ ಅತ್ಯುತ್ತಮ ಓದು ನಿಮ್ಮದಾಗುತ್ತದೆ. ಪರೀಕ್ಷೆ ಹತ್ತಿರ ಬಂದಾಗ ಕೇವಲ ಒಂದು ಸಲ ಓದಿದರೂ ಸಾಕಾಗುತ್ತದೆ. ❋